# ನಿಮ್ಮೊಡನೆ

## ಸೊಳ್ಳೆ ನಿಯಂತ್ರಣವನ್ನೂ ಮಾಡಲಾಗದಷ್ಟು ಸೊರಗಿವೆಯೇ ನಮ್ಮ ಸ್ಥಳೀಯ ಆಡಳಿತಗಳು?

**ಬೆಂಗಳೂರಂತೂ ಡೆಂಗಿ ಜ್ವರದ ರಾಜಧಾನಿ ಎನ್ನುವ ಕುಖ್ಯಾತಿ ಪಡೆಯಲು ಸ್ಪರ್ಧೆಗೆ ಇಳಿದಂತಿದೆ. ಚರಂಡಿ ಹಾಗೂ ಮೋರಿಗಳನ್ನು ಸುಸ್ಥಿತಿಯಲ್ಲಿಡಲು ವಿಫಲವಾಗಿರುವ ಪಾಲಿಕೆ, ಸೊಳ್ಳೆಗಳ ಸಂತಾನೋತ್ಪತ್ತಿಗೆ ಪೂರಕ ವಾತಾವರಣವನ್ನು ಸೃಷ್ಟಿಸಿದೆ. ಬೆಂಗಳೂರಿನ ಸ್ಥಿತಿಯೇ ಹೀಗಿರಬೇಕಾದರೆ ರಾಜ್ಯದ ಉಳಿದೆಡೆ ಪರಿಸ್ಥಿತಿ ಹೇಗಿರಬಹುದು?**

ಸೊಳ್ಳೆಗಳು ಹಲವು ಬಗೆಯ ರೋಗ–ರುಜಿನಗಳ ವಾಹಕಗಳು. ಸೊಳ್ಳೆಗಳನ್ನು ನಿಯಂತ್ರಿಸಿದರೆ ಅವು ತಂದೊಡ್ಡುವ ರೋಗಬಾಧೆಯಿಂದ ಹಾಸಿಗೆ ಹಿಡಿಯುವ ಪ್ರಮೇಯ ಉಂಟಾಗದು, ಆಸ್ಪತ್ರೆಗಳಿಗೆ ಅಲೆಯಬೇಕಾದ ಕಷ್ಟ ಎದುರಾಗದು ಮತ್ತು ಚಿಕಿತ್ಸೆ–ಔಷಧಿ ಅಂತ ಸಾವಿರಾರು ರೂಪಾಯಿ ವೆಚ್ಚ ಮಾಡಬೇಕಾದ ಅನಿವಾರ್ಯ ಸ್ಥಿತಿ ತಲೆದೋರದು. ಆದರೆ ಯಃಕಶ್ಚಿತ್ ಸೊಳ್ಳೆ ನಿಯಂತ್ರಣ ನಮ್ಮ ಆಡಳಿತ ವ್ಯವಸ್ಥೆಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಆ ಕಹಿಸತ್ಯ ದಿನನಿತ್ಯ ನಮ್ಮ ಅನುಭವಕ್ಕೆ ಬರುತ್ತಲೇ ಇರುತ್ತದೆ!

ಡೆಂಗಿಜ್ವರ ಈ ಸಲ ಅತಂಕಕಾರಿ ಮಟ್ಟದಲ್ಲಿ ರಾಜ್ಯದ ಜನರನ್ನು ಕಾಡಿದೆ. ಈಚೆಗೆ ಕೆಲವೇ ದಿನಗಳ ಅವಧಿಯಲ್ಲಿ ಏಳು ಸಾವಿರಕ್ಕೂ ಹೆಚ್ಚು ಡೆಂಗಿ ಪ್ರಕರಣಗಳು ವರದಿಯಾಗಿವೆ. ಅದರಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಪ್ರಕರಣಗಳು ಬೆಂಗಳೂರಿನಲ್ಲೇ ವರದಿಯಾಗಿವೆ. ಹಾಗಂತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹೇಳಿದ್ದಾರೆ. ಡೆಂಗಿ ಪ್ರಕರಣಗಳು ಈ ಮಟ್ಟದಲ್ಲಿ ಉಲ್ಬಣಿಸುವುದಕ್ಕೆ ಸೊಳ್ಳೆ ನಿಯಂತ್ರಣಕ್ಕೆ ಸೂಕ್ತ ಮುನ್ನೆಚ್ಚರಿಕೆ ವಹಿಸದಿರುವುದೇ ಪ್ರಧಾನ ಕಾರಣ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಾಗೂ ರಾಜ್ಯದ ಇತರ ಸ್ಥಳೀಯ ಆಡಳಿತಗಳು ಮತ್ತು ಆರೋಗ್ಯ ಇಲಾಖೆಯು ತಮ್ಮ ಹೊಣೆಗಾರಿಕೆ ನಿಭಾಯಿಸುವಲ್ಲಿ ವಿಫಲವಾಗಿರುವುದರಿಂದ ಜನ ರೋಗಬಾಧೆಯಿಂದ ನರಳುವಂತಾಗಿದೆ. ಡೆಂಗಿ ಪ್ರಕರಣಗಳು ಹೆಚ್ಚಾಗಿರುವುದರ ಹಿನ್ನೆಲೆಯಲ್ಲಿ ಸೊಳ್ಳೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸ್ಥಳೀಯ ಆಡಳಿತಗಳು ಕೈಗೊಂಡಿರುವ ಕ್ರಮಗಳ ಕುರಿತು 'ಲೋಕಲ್ ಸರ್ಕಲ್ಸ್' ಎಂಬ ಸಾಮಾಜಿಕ ಜಾಲತಾಣವು ಸಮೀಕ್ಷೆಯೊಂದನ್ನು ನಡೆಸಿದೆ. ಅದರಲ್ಲಿ ಭಾಗವಹಿಸಿದ್ದವರಲ್ಲಿ ಶೇಕಡ 72ರಷ್ಟು ಮಂದಿ, ಸೊಳ್ಳೆ ಹಾವಳಿ ನಿಯಂತ್ರಣಕ್ಕೆ ಸ್ಥಳೀಯ ಆಡಳಿತಗಳು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.


ಚಿಕಿತ್ಸೆಗಿಂತಲೂ ರೋಗವನ್ನು ನಿಯಂತ್ರಿಸುವುದೇ ಹೆಚ್ಚು ಪರಿಣಾಮಕಾರಿ ಎನ್ನುವ ಮೂಲಮಂತ್ರವನ್ನು ನಮ್ಮ ಸ್ಥಳೀಯ ಆಡಳಿತಗಳು ಅರ್ಥಾತ್ ಅಲ್ಲಿನ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಮರೆತಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ. ಮಳೆನೀರು ನಿಲ್ಲುವ ಸ್ಥಳಗಳಲ್ಲಿ ಸೊಳ್ಳೆಗಳ ಸಂತತಿ ಉಲ್ಬಣಗೊಂಡ ಪರಿಣಾಮವಾಗಿ ಡೆಂಗಿ ವ್ಯಾಪಕವಾಗಿದೆ. ಹಾದಿಬೀದಿಗಳಲ್ಲಿ ಮಳೆನೀರು ನಿಲ್ಲುತ್ತಿದ್ದರೆ ಅದರ ಹೊಣೆ ಹೊರಬೇಕಾದವರು ಯಾರು? ಮಳೆನೀರು ನಿಲ್ಲದಂತೆ ಮುನ್ನೆಚ್ಚರಿಕೆ ವಹಿಸಲು ಯಾಕೆ ಸಾಧ್ಯವಾಗುತ್ತಿಲ್ಲ?

ಆಡಳಿತ ವ್ಯವಸ್ಥೆಯ ವೈಫಲ್ಯದ ಹೊರೆ ನಾಗರಿಕರ ಹೆಗಲಿಗೇರಿದೆ. ಸಂಜೆ ಆಗುತ್ತಿದ್ದಂತೆಯೇ ಸೊಳ್ಳೆಗಳು ಮನೆಯೊಳಗೆ ನುಗ್ಗಲಾರಂಭಿಸುತ್ತವೆ. ಅಷ್ಟರಲ್ಲಿ ಮನೆಯ ಬಾಗಿಲು, ಕಿಟಕಿಗಳು ಬಂದ್ ಆಗಿರಲೇಬೇಕು. ಇಲ್ಲದೇಹೋದರೆ ರಾತ್ರಿಯ ನಿದ್ರೆಗೆ ಭಂಗ. ಮನೆಯನ್ನು ಎಷ್ಟೇ ಸ್ವಚ್ಛವಾಗಿಟ್ಟರೂ ಮನೆಯ ಯಾವುದೋ ಮೂಲೆಯಲ್ಲಿ ಅಡಗಿ ಕೂತಿರುತ್ತವೆ. ರಾತ್ರಿಯಾಗುತ್ತಲೇ ಕಿರಿಕಿರಿ ಶುರು ಮಾಡುತ್ತವೆ. ಹೊರಗೆ ಬಂದು ಗಾಳಿಗೆ ಮೈಯೊಡ್ಡಿ ಕುಳಿತುಕೊಳ್ಳೋಣ ಎಂದರೆ ಅದಕ್ಕೂ ಅವಕಾಶ ನೀಡುವುದಿಲ್ಲ. ಜನಸಾಮಾನ್ಯರ ದೈನಂದಿನ ಬದುಕನ್ನು ಈ ಜುಜುಬಿ ಸೊಳ್ಳೆ ಆ ಮಟ್ಟಿಗೆ ದುಸ್ತರಗೊಳಿಸಿದೆ.

ಸೊಳ್ಳೆಪರದೆ, ಕ್ರೀಮು, ಕಾಯಿಲ್, ಬ್ಯಾಟು... ಹೀಗೆ ನಿಯಂತ್ರಣಕ್ಕೆ ತಮ್ಮ ಸಾಮರ್ಥ್ಯ ಅನುಸಾರ ಯಾವುದೇ ಉಪಕ್ರಮದ ಮೊರೆ ಹೋದರೂ ಸೊಳ್ಳೆಕಾಟದಿಂದ ಮುಕ್ತಿ ಸಿಗುತ್ತಿಲ್ಲ. ಸಣ್ಣ ಮಕ್ಕಳಿದ್ದರಂತೂ ಮತ್ತಷ್ಟು ಮುತುವರ್ಜಿ ವಹಿಸಬೇಕಾದ ಅನಿವಾರ್ಯ. ಇಲ್ಲದಿದ್ದರೆ ಡೆಂಗಿ, ಮಲೇರಿಯಾ ಎಂದು ಕ್ಲಿನಿಕ್, ಆಸ್ಪತ್ರೆ ಅಂತ ಲಕ್ಷ, ಲಕ್ಷ ಖರ್ಚು. ಬೆಂಗಳೂರಂತೂ ಡೆಂಗಿ ಜ್ವರದ ರಾಜಧಾನಿ ಎನ್ನುವ ಕುಖ್ಯಾತಿ ಪಡೆಯಲು ಸ್ಪರ್ಧೆಗೆ ಇಳಿದಂತಿದೆ. ಡೆಂಗಿ ಪ್ರಕರಣಗಳ ಸಂಖ್ಯೆಯನ್ನು ಕಲೆಹಾಕುವುದಷ್ಟೇ ತನ್ನ ಕೆಲಸ ಎಂದು ಬಿಬಿಎಂಪಿ ಭಾವಿಸಿದಂತಿದೆ. ಚರಂಡಿ ಹಾಗೂ ಮೋರಿಗಳನ್ನು ಸುಸ್ಥಿತಿಯಲ್ಲಿಡಲು ವಿಫಲವಾಗಿರುವ ಪಾಲಿಕೆ, ಸೊಳ್ಳೆಗಳ ಸಂತಾನೋತ್ಪತ್ತಿಗೆ ಪೂರಕ ವಾತಾವರಣವನ್ನು ಸೃಷ್ಟಿಸಿದೆ. ಬೆಂಗಳೂರಿನ ಸ್ಥಿತಿಯೇ ಹೀಗಿರಬೇಕಾದರೆ ರಾಜ್ಯದ ಉಳಿದೆಡೆ ಪರಿಸ್ಥಿತಿ ಹೇಗಿರಬಹುದು ಎಂಬುದನ್ನು ಯಾರಾದರೂ ಊಹಿಸಬಹುದು.

ಸೊಳ್ಳೆಗಳ ನಿಯಂತ್ರಣ ಆದ್ಯತೆಯ ಕೆಲಸ ಎಂದು ಪರಿಗಣಿಸುವುದರ ಜೊತೆಗೆ ಪರಿಸರವನ್ನು ಚೊಕ್ಕಟವಾಗಿಡುವ ಅಗತ್ಯದ ಕುರಿತು ಆರೋಗ್ಯ ಇಲಾಖೆ ಮತ್ತು ಸ್ಥಳೀಯ ಆಡಳಿತಗಳು ಸಾರ್ವಜನಿಕರಿಗೆ ಅರಿವು ಮೂಡಿಸುವ ಕೆಲಸವನ್ನು ನಿರಂತರವಾಗಿ ಮಾಡಬೇಕು. ನಗರ–ಪಟ್ಟಣಗಳಲ್ಲಿ ಖಾಲಿ ನಿವೇಶನಗಳು ಕಸ ತುಂಬುವ ತಾಣಗಳಾಗಿ ಪರಿವರ್ತನೆಯಾಗಿವೆ. ಖಾಲಿ ನಿವೇಶನಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವ ಅಗತ್ಯವನ್ನು ಮಾಲೀಕರಿಗೆ ಮನಗಾಣಿಸಬೇಕು. ತಪ್ಪಿದಲ್ಲಿ ದಂಡದ ಅಸ್ತ್ರ ಪ್ರಯೋಗಿಸಬೇಕು. ಸ್ಥಳೀಯ ಆಡಳಿತಗಳು ಹೆಚ್ಚು ಬದ್ಧತೆಯಿಂದ ಮತ್ತು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಹಾಗೆ ನಡೆದುಕೊಳ್ಳುವಂತೆ ಮಾಡುವಲ್ಲಿ ಜನರ ಪಾತ್ರವೂ ಇದೆ.

■ ಎನ್. ಉದಯಕುಮಾರ್



ಈಶ್ವರ್